# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 698 |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22/02/2022 |
| ಉತ್ತರಿಸುವ ಸಚಿವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿರುವ ಪ್ರತಿ ಅಂಗನವಾಡಿಗೆ ನೀಡಲಾಗುತ್ತಿರುವ "ಮೊಟ್ಟೆ" ಗಳ ಸಂಖ್ಯೆಯೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿರುವ ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ನೊಂದಾಯಿಸಲ್ಪಟ್ಟ ಈ ಕೆಳಕಂಡ ಫಲಾನುಭವಿಗಳಿಗೆ ಕೆಳಕಂಡಂತೆ ಕೋಳಿ "ಮೊಟ್ಟೆ" ನೀಡಲಾಗುತ್ತಿದೆ.<br><br>1. 3 ವರ್ಷದಿಂದ 6 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 2 ದಿನ ಕೋಳಿ ಮೊಟ್ಟೆಗಳು<br>2. 3 ವರ್ಷದಿಂದ 6 ವರ್ಷದ ತೀವ್ರ ಅಪೌಷ್ಟಿಕ ಮಕ್ಕಳಿಗೆ ಮತ್ತು 5 ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಇಲ್ಲಿಯ ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆಗಳು<br>3. 6 ತಿಂಗಳಿಂದ 3 ವರ್ಷದ ತೀವ್ರ ಅಪೌಷ್ಟಿಕ ಮಕ್ಕಳಿಗೆ ಮತ್ತು 5 ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಇಲ್ಲಿಯ ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆಗಳು<br>4. ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ, ಬಾಣಂತಿಯರು, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ವಾರದಲ್ಲಿ 6 ದಿನ ಮೊಟ್ಟೆಗಳು<br><br>ರಾಜ್ಯದ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಜಿಲ್ಲಾವಾರು ಮೊಟ್ಟೆಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |
| ಆ. | ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಪ್ರತಿ ತಿಂಗಳು ಎಷ್ಟು "ಮೊಟ್ಟೆ" ಗಳನ್ನು ಖರೀದಿಸಲಾಗುತ್ತಿದೆ: | ರಾಜ್ಯದ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಜನವರಿ–2022ರ ಮಾಹೆಯಲ್ಲಿ 45579983 ಮೊಟ್ಟೆಗಳನ್ನು ಖರೀದಿಸಿ ವಿತರಿಸಲಾಗಿರುತ್ತದೆ. |

| | | |
|---|---|---|
| ಇ. | ಪ್ರತಿ "ಮೊಟ್ಟೆ"ಗೆ ಸರ್ಕಾರ ನಿಗದಿಪಡಿಸಿರುವ ಹಣವೆಷ್ಟು; | ಪ್ರತಿ ಮೊಟ್ಟೆಗೆ ರೂ.5/- ನ್ನು ನಿಗದಿಪಡಿಸಿದೆ. |
| ಈ. | ನಿಗದಿಪಡಿಸಿರುವ ಮೊತ್ತಕ್ಕಿಂತ ಹೆಚ್ಚು ದರ ಇದ್ದಲ್ಲಿ ಅದನ್ನು ಭರಿಸುವವರು ಯಾರು; | ಗ್ರಾಮೀಣ ಪ್ರದೇಶದಲ್ಲಿ ಕೋಳಿಮೊಟ್ಟೆ ದರವು ನಿಗದಿಪಡಿಸಿರುವ ಮೊತ್ತಕ್ಕಿಂತ ಹೆಚ್ಚು ದರ ಇದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ಗ್ರಾಮ ಪಂಚಾಯಿತಿಗಳ ಸ್ವಂತ ಸಂಪನ್ಮೂಲದಿಂದ ಭರಿಸಲು ಸುತ್ತೋಲೆ ಹೊರಡಿಸಲಾಗಿದೆ.<br><br>ನಗರ ಪ್ರದೇಶಗಳಲ್ಲಿ ಪ್ರತೀ ಮೊಟ್ಟೆಗೆ ರೂ.5/-ರ ದರದಲ್ಲಿಯೇ ಖರೀದಿಸಲಾಗುತ್ತಿದೆ. |
| ಉ. | ಅಂಗನವಾಡಿ ಕೇಂದ್ರಗಳಿಗೆ "ಮೊಟ್ಟೆ" ಸರಬರಾಜು ಮಾಡುವವರು ಯಾರು; ಮತ್ತು ಅದರ ಜವಾಬ್ದಾರಿಯನ್ನು ಯಾರು ವಹಿಸಿಕೊಂಡಿದ್ದಾರೆ? (ವಿವರ ನೀಡುವುದು) | ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಅಗತ್ಯವಿರುವ ಕೋಳಿಮೊಟ್ಟೆಗಳನ್ನು ಖರೀದಿಸಲು ಅವಶ್ಯವಿರುವ ಹಣವನ್ನು ಬಾಲವಿಕಾಸ ಸಮಿತಿಯ ಜಂಟಿ ಖಾತೆಗೆ ಜಮೆ ಮಾಡಲಾಗುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರು ಸ್ಥಳೀಯವಾಗಿ ಮೊಟ್ಟೆಗಳನ್ನು ಖರೀದಿಸಿ ಫಲಾನುಭವಿಗಳಿಗೆ ವಿತರಿಸುತ್ತಿದ್ದಾರೆ. |

**ಸಂಖ್ಯೆ:** ಮಮಇ 48 ಐಸಿಡಿ 2022

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 698 ಕ್ಕೆ ಒದಗಿಸಲಾದ ಅನುಬಂಧ**

| ಕ್ರ ಸಂ. | ಜಿಲ್ಲೆಯ ಹೆಸರು | ತಿಂಗಳಿಗೆ ಬೇಕಾಗುವ ಮೊಟ್ಟೆಗಳ ಸಂಖ್ಯೆ (ಜನವರಿ–2022ರ ಮಾಹೆಯಲ್ಲಿ) |
|---|---|---|
| 1 | ಬಾಗಲಕೋಟೆ | 1994993 |
| 2 | ಬೆಂಗಳೂರು(ಗ್ರಾ) | 663855 |
| 3 | ರಾಮನಗರ | 657746 |
| 4 | ಬೆಂಗಳೂರು(ನ) | 2037542 |
| 5 | ಬೆಳಗಾಂ | 4538785 |
| 6 | ಬಳ್ಳಾರಿ | 2788209 |
| 7 | ಬೀದರ್ | 1682674 |
| 8 | ವಿಜಯಪುರ | 2462296 |
| 9 | ಚಾಮರಾಜನಗರ | 616664 |
| 10 | ಚಿಕ್ಕಮಗಳೂರು | 684720 |
| 11 | ಚಿತ್ರದುರ್ಗ | 1327204 |
| 12 | ಮಂಗಳೂರು | 1593625 |
| 13 | ದಾವಣಗೆರೆ | 1226286 |
| 14 | ಧಾರವಾಡ | 1414002 |
| 15 | ಗದಗ | 1018475 |
| 16 | ಕಲ್ಬುರ್ಗಿ | 2700634 |
| 17 | ಯಾದಗಿರಿ | 1951380 |
| 18 | ಹಾಸನ | 1020809 |
| 19 | ಹಾವೇರಿ | 1484688 |
| 20 | ಕೋಲಾರ | 1088528 |
| 21 | ಚಿಕ್ಕಬಳ್ಳಾಪುರ | 1006837 |
| 22 | ಕೊಡಗು | 342301 |
| 23 | ಕೊಪ್ಪಳ | 1888857 |
| 24 | ಮಂಡ್ಯ | 1037545 |
| 25 | ಮೈಸೂರು | 1669701 |
| 26 | ರಾಯಚೂರು | 2213524 |
| 27 | ಶಿವಮೊಗ್ಗ | 1140294 |
| 28 | ತುಮಕೂರು | 1647827 |
| 29 | ಉಡುಪಿ | 653831 |
| 30 | ಉತ್ತರಕನ್ನಡ | 1026151 |
| **ಒಟ್ಟು** | | **45579983** |